International Journal of Kannada Research
www.kannadajournal.com

**ISSN: 2454–5813**
IJKR 2024; 10(1): 190-192
© 2024 IJKR
www.kannadajournal.com
Received: 12-01-2024
Accepted: 16-02-2024

**ಡಾ.ಹೇಮಂತ್ ಕುಮಾರ್ ಎಸ್**
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಶ್ರೀ ಸತ್ಯ ಸಾಯಿ ಮಾನವ
ಅಭ್ಯುದಯ ವಿಶ್ವವಿದ್ಯಾಲಯ
ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ,
ಕರ್ನಾಟಕ, ಭಾರತ

**Corresponding Author:**
**ಡಾ.ಹೇಮಂತ್ ಕುಮಾರ್ ಎಸ್**
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಶ್ರೀ ಸತ್ಯ ಸಾಯಿ ಮಾನವ
ಅಭ್ಯುದಯ ವಿಶ್ವವಿದ್ಯಾಲಯ
ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ,
ಕರ್ನಾಟಕ, ಭಾರತ

# ನಾ. ಕಸ್ತೂರಿಯವರ 'ಅಶೋಕ' ಕೃತಿಯಲ್ಲಿ ಐತಿಹಾಸಿಕ ಅಂಶಗಳು

**ಡಾ.ಹೇಮಂತ್ ಕುಮಾರ್ ಎಸ್**

**ಪೀಠಿಕೆ**

ನಾ.ಕಸ್ತೂರಿಯವರು ಮೂಲತಃ ಇತಿಹಾಸ ಪ್ರಾಧ್ಯಾಪಕರು. ಸಾಹಿತ್ಯಕ್ಕೆ ಎಷ್ಟು ಬೆಲೆ ಕೊಡುತ್ತಿದ್ದರೋ ಅಷ್ಟೇ ಮಹತ್ವವನ್ನು ಇತಿಹಾಸಕ್ಕೂ ಕೊಡುತ್ತಿದ್ದರು ಎನ್ನುವುದಕ್ಕೆ ಈ ಐತಿಹಾಸಿಕ ಕೃತಿ 'ಅಶೋಕ' ಕೃತಿಯೇ ಸಾಕ್ಷಿ. 1952ರಲ್ಲಿ ಮೈಸೂರು ವಿಶ್ವವಿದ್ಯಾಲಯ ಕನ್ನಡ ಗ್ರಂಥಮಾಲೆ ಅಡಿಯಲ್ಲಿ ಪ್ರಕಟಿಸಿದ್ದಾರೆ. ನಾವು ಯಾವುದೇ ದೇಶದ ಚರಿತ್ರೆಯನ್ನು ಗಮನಿಸಿದರೆ, ರಕ್ತಪಾತವಿಲ್ಲದ ದೇಶವಿಲ್ಲವೆನ್ನಬಹುದು. ಮಾನವ ಇತಿಹಾಸದಲ್ಲಿ ಪ್ರತಿಯೊಬ್ಬ ರಾಜನು ಸಾಮ್ರಾಜ್ಯ ವಿಸ್ತರಣೆಗಾಗಿ ಸಿಂಹಾಸನ ಪಡೆಯಲು ಅಥವಾ ಸಿಂಹಾಸನ ಉಳಿಸಿಕೊಳ್ಳಲು ಹಿಂಸೆಯ ಹಾದಿಯನ್ನೇ ಬಹುತೇಕ ರಾಜರು ಹಿಡಿದಿದ್ದಾರೆ. ಇಂದಿಗೂ ಹಿಂಸಾಪ್ರತಿಕ್ರಿಯೆಗಳಿಂದ ಪಾರಾಗಲು ಸಾಧ್ಯವಿಲ್ಲವೆಂಬಂತೆ ತೋರುತ್ತಿದೆ. ಹಿಂಸೆಗಳನ್ನು ನಿವಾರಿಸಿ ಭೂಮಂಡಲದಲ್ಲಿ ಶಾಂತಿ ಸ್ಥಾಪಿಸಲು ಬುದ್ಧ, ಕ್ರೈಸ್ತ, ಮಹಮ್ಮದ, ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ರಮಣಮಹರ್ಷಿ, ಶ್ರೀ ಅರವಿಂದರು, ಶ್ರೀ ಸತ್ಯಸಾಯಿಬಾಬಾ, ಶ್ರೀ ರವಿಶಂಕರ ಗುರೂಜಿಗಳು ಮುಂತಾದ ಸಂತರುಗಳು ಮತ್ತು ಮಹಾತ್ಮರು ನಿರಂತರವಾಗಿ ಪ್ರಯತ್ನ ಮಾಡಿದ್ದಾರೆ. ಆದರೆ ರಾಜನಾಗಿದ್ದುಕೊಂಡು ಶಾಂತಿ ಸ್ಥಾಪನೆಗೆ ದುಡಿದಿದ್ದು ಅತಿವಿರಳ. ಯುದ್ಧ, ಹಿಂಸೆಗಳು ಶಾಶ್ವತವಾಗಿ ಇಲ್ಲವಾಗುವಂತೆ ಮಾಡಿ ಶಾಂತಿಯನ್ನು ನೆಲೆಗೊಳಿಸಲು ಪ್ರಯತ್ನಿಸಿದವನು ಅಶೋಕ ಮಾತ್ರ ಎನ್ನಬಹುದು. ಈತ ಚಕ್ರವರ್ತಿ ಮಾತ್ರ ಆಗಿರದೆ ಮಹಾದಾರ್ಶನಿಕನೂ ಆಗಿದ್ದ. ಅಶೋಕ ಎಂದರೆ ಸಂಯಮಿ; ಶೋಕವಿಲ್ಲದ್ದು, ದುಃಖವಿಲ್ಲದ್ದು ಎಂದು ಅರ್ಥ. ಯುದ್ಧದಲ್ಲಿ ತೊಡಗಿದ ಇಬ್ಬರಿಗೂ ಕಷ್ಟ–ನಷ್ಟ, ಸಾವು–ನೋವು ತಪ್ಪಿದ್ದಲ್ಲ ಎಂಬುದನ್ನು ಅರಿತ ಅಶೋಕ ತೀವ್ರ ವೈರಾಗ್ಯ ತಾಳಿ ಶಾಂತಿದೂತನಾಗಿ ಪರಿವರ್ತನೆಯಾಗುತ್ತಾನೆ. ಮತ್ತೆ ಹಿಂಸೆಯಲ್ಲಿ ತೊಡಗುವುದಿಲ್ಲವೆಂದು ವೀರಸಂಕಲ್ಪ ಮಾಡುತ್ತಾನೆ. ಈ ಹಿನ್ನೆಲೆಯಲ್ಲಿ ಕಸ್ತೂರಿಯವರು ಅಶೋಕನ ಚರಿತ್ರೆಯನ್ನು ಸಂಕ್ಷಿಪ್ತವಾಗಿಯಾದರೂ ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಅಶೋಕನಿಗೆ ಬಿಂದುಸಾರನ ಸಿಂಹಾಸನ ಅನಯಾಸವಾಗಿ ಬಂತೆಂದು ಮತ್ತು ಬಿಂದುಸಾರನ ಮರಣಾನಂತರ ನಾಲ್ಕು ವರ್ಷಗಳು ಪಟ್ಟಾಭಿಷೇಕಕ್ಕಾಗಿ ಕೆಲವು ಕಾರಣಗಳಿಂದ ಕಾಯಬೇಕಾದ ವಿಚಾರವನ್ನು ಸಿಂಹಳ ಮತ್ತು ಭಾರತದಲ್ಲಿ ಸಿಗುವ ಚರಿತ್ರೆ ಅಧ್ಯಯನದ ಆಧಾರದಲ್ಲಿ ಕಸ್ತೂರಿ ಉಲ್ಲೇಖಿಸಿದ್ದಾರೆ.

ಕಸ್ತೂರಿಯವರು ಅಶೋಕನ ಜೀವನ ಚರಿತ್ರೆಯ ಜೊತೆಗೆ ಮೌರ್ಯವಂಶದ ಸ್ಥಾಪನೆಯ ವಿಚಾರಗಳನ್ನು ನೀಡಿದ್ದಾರೆ. ಚಂದ್ರಗುಪ್ತನು ಚಾಣಕ್ಯನ ಸಹಾಯದಿಂದ ಮಗಧ ಮತ್ತಿತ್ತರ ಪ್ರದೇಶಗಳನ್ನು ಗೆದ್ದು ಯಾವ ರೀತಿಯ ಸಾಮ್ರಾಜ್ಯ ವಿಸ್ತರಣೆ ಮಾಡಿದನು ಎಂಬ ವಿಚಾರವನ್ನು ಹಾಗೂ ಕೆಲವು ಐತಿಹ್ಯಗಳನ್ನು ಕಸ್ತೂರಿಯವರು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಅಶೋಕನ ಅಹಿಂಸಾತತ್ವ ಮತ್ತು ಧಾರ್ಮಿಕತೆಯಲ್ಲಿನ ನಂಬಿಕೆ ವಿಚಾರಗಳನ್ನು ಗಮನಿಸಿದಾಗ ಕಳಿಂಗ ಯುದ್ಧಕ್ಕೆ ಮುಂಚಿತವಾಗಿಯೇ ಅವನಲ್ಲಿ ಆ ಗುಣಗಳು ಇದ್ದವು ಎಂಬುದನ್ನು ಶಾಸನಗಳ ಆಧಾರದಲ್ಲಿ ಅಧ್ಯಯನ ಮಾಡಿದ ಕಸ್ತೂರಿಯವರು ಅದರ ಕುರಿತು ಈ ರೀತಿ ಉಲ್ಲೇಖ ಮಾಡುತ್ತಾರೆ. "ಕಳಿಂಗ ಯುದ್ಧದಲ್ಲಾದ ಮನೋವೇದನೆಯಿಂದ ಅಶೋಕನಲ್ಲಿ ಅಹಿಂಸಾ ಬುದ್ಧಿ ಹುಟ್ಟಿತ್ತೆಂದೂ ಅಂದಿನಿಂದ ಅವನು ಬುದ್ಧ ಧರ್ಮ ಸಂಘ ಎಂಬ ತ್ರಿರತ್ನಗಳಿಗೆ ಮನಸೋತು ಉಪಾಸಕನಾದನೆಂದೂ ಸಾಮಾನ್ಯವಾಗಿ ಎಲ್ಲರೂ ನಂಬುವರು. ಆದರೆ ಅಶೋಕನು 'ಈಗ ಕಳಿಂಗರು ಕೈವಶರಾದ ನಂತರ ದೇವಾನನಾಂಪ್ರಿಯನ ಧರ್ಮಪಾಲನೆ ಧರ್ಮಕಾಮತೆ ಹಾಗೂ ಧರ್ಮಾನುಶಾಸ್ತಿ ತೀವ್ರವಾದವು' ಎಂದು

ಹೇಳಿರುವುದರಿಂದ ಆ ಯುದ್ಧದ ಮೊದಲೇ ಅಶೋಕನಿಗೆ ಅದರಲ್ಲಿ ಭಕ್ತಿಗೌರವಗಳು ಮೊಳಕೆಯಾಗಿತ್ತೆಂದು ಹೇಳಿದರೆ ತಪ್ಪಾಗಲಾರದು."[1] ಜೊತೆಗೆ ಕಸ್ತೂರಿಯವರು ಮತ್ತೊಂದು ಊಹೆಯನ್ನು ಈ ರೀತಿ ಹೇಳುತ್ತಾರೆ. "ಬುದ್ಧದೇವನು ಬೋಧಿ ಜ್ಞಾನವನ್ನು ಪಡೆದ ಗಯೆಗೆ ತೀರ್ಥಯಾತ್ರೆ ಹೋದದ್ದೆಂದು ಕೆಲವರೂ ಇದಕ್ಕೆ ಅರ್ಥ ಹೇಳುವರು. ಇದರಿಂದ ಧರ್ಮಯಾತ್ರೆ ಮೊದಲಾಯಿತು ಎಂದು ಅಶೋಕನು ಸಾರಿರುವುದರಿಂದ ಅಶೋಕನು ಮಾಡಿದ್ದೂ ಒಂದು ಯಾತ್ರೆಯೇ ಇರಬೇಕೆಂದು ಅಭಿಪ್ರಾಯ ಸಮಂಜಸವಾಗಿದೆ, ಅಭಿಷಿಕ್ತನಾದ ಹತ್ತನೆಯ ವರ್ಷದಲ್ಲಿ ಬೋಧಿವೃಕ್ಷ ದರ್ಶನಕ್ಕಗಿ ತೀರ್ಥಯಾತ್ರೆ ಹೊರಡುವಷ್ಟು ಭಕ್ತನಾಗುತ್ತಾನೆ ಅಶೋಕನು. ಅಂದರೆ, ಕಲಿಂಗಯುದ್ಧಕ್ಕೆ ಒಂದೆರಡು ವರ್ಷ ಮೊದಲೇ ಅವನು ಉಪಾಸಕನಾಗಿ ಸೇರಿ ಅದಾದ ನಂತರ ಧರ್ಮಾಭಿಲಾಷೆ ಹೆಚ್ಚಿ ಸಂಘದ ಸಹವಾಸದಲ್ಲಿ ಮತ್ತಷ್ಟು ದಿನವಿದ್ದು ಫಲ ಪಡೆದಿರಬೇಕೆಂದು ನಾವು ಊಹಿಸಬಹುದಾಗಿದೆ[2]."

ಎಲ್ಲರೂ ಅಂದುಕೊಂಡಂತೆ ಕಳಿಂಗ ದೇಶ ಮೊದಲು ಚಂದ್ರಗುಪ್ತನ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಇತ್ತು ಎಂದು. ಆದರೆ ಕಸ್ತೂರಿಯವರು ಮೆಗಾಸ್ತನೀಸ್, ಬೌದ್ಧ ಚರಿತ್ರೆ, ಇತಿಹಾಸ; ಮತ್ತು ಅಶೋಕನ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ ಸಂಶೋಧಿಸಿ, ಕಳಿಂಗದೇಶ ಮೊದಲು ಚಂದ್ರಗುಪ್ತ ಹಾಗೂ ಬಿಂದುಸಾರನ ಆಳ್ವಿಕೆಯಲ್ಲಿರಲಿಲ್ಲ ಎನ್ನುತ್ತಾರೆ. ಕಳಿಂಗ ಯುದ್ಧವಾದಾಗ ಅಲ್ಲಿನ ಸಾವು–ನೋವುಗಳ ಕುರಿತು ಅಶೋಕ ಈ ರೀತಿ ಹೇಳುತ್ತಾನೆ "ಒಂದೂವರೆ ಶತಸಹಸ್ರ ಜನರನ್ನು ಅಲ್ಲಿಂದ ಸೆರಹಿಡಿದು ಸಾಗಿಸಲಾಯಿತು; ಶತಸಹಸ್ರ ಜನರು ಅಲ್ಲಿ ಹತರಾದರು; ಅದಕ್ಕಿಂತ ಬಹುಮಂದಿ ಮೃತರಾದರು"[3] ಇದರಿಂದಲೇ ತಿಳಿಯುತ್ತದೆ, ಅಶೋಕನ ಸೈನ್ಯ ಎಷ್ಟು ಶಕ್ತಿಯುತವಾಗಿತ್ತು ಎಂಬುದು. ಮುಂದೆ ಕಳಿಂಗ ಯುದ್ಧದಿಂದ ತುಂಬಾ ಮನನೊಂದು ಪಶ್ಚಾತ್ತಾಪ ಪಟ್ಟು ಬೌದ್ಧಧರ್ಮದ ಅಹಿಂಸಾ ತತ್ವ ಮತ್ತು ಬೋಧನೆಗಳನ್ನು ಅನುಸರಿಸುತ್ತಾನೆ. ಸಂಪೂರ್ಣ ಶಾಂತಿಯನ್ನು ಘೋಷಿಸುತ್ತಾನೆ. ಮತ್ತು ಧರ್ಮವಿಜಯವೇ ಶ್ರೇಷ್ಠವೆಂದು ಧರ್ಮಯಾತ್ರೆಯಲ್ಲಿ ನಿರತನಾಗುತ್ತಾನೆ. ಅಶೋಕನ ಎಂಟನೆಯ ಶಾಸನದಲ್ಲಿ "ಬಹುಕಾಲದವರೆಗೆ ದೇವನಾಂಪ್ರಿಯರು ವಿಹಾರಯಾತ್ರೆ ಎಂಬುದನ್ನು ಮಾಡುತ್ತಿದ್ದರು. ಆಗ ಬೇಟೆ ಮತ್ತು ಇತರ ಮನೋರಂಜನೆಗಳು ನಡೆಯುತ್ತಿದ್ದವು. ಆದರೆ ದೇವನಾಂಪ್ರಿಯ ಪ್ರಿಯದರ್ಶಿರಾಜನು ಅಭಿಷಿಕ್ತನಾಗಿ ಹತ್ತು ವರ್ಷಗಳಾದಾಗ ಸಂಭೋದಿಗೆ ಹೋದನು. ಇಲ್ಲಿಂದ ಧರ್ಮಯಾತ್ರೆ ಮೊದಲಾದುದು. ಆಗ ನಡೆಯುವುದೇನೆಂದರೆ; ಬ್ರಾಹ್ಮಣ ಶ್ರಮಣರ ದರ್ಶನ, ಅವರಿಗೆ ದಾನ; ಹಿರಿಯರ ದರ್ಶನ, ಅವರಿಗೆ ಹಿರಣ್ಯದಾನ; ಜನಪದದ, ಜನರ, ದರ್ಶನ, ಅವರಿಗೆ ಧರ್ಮಾನುಶಾಸ್ತಿ, ಅವರೊಂದಿಗೆ ಧರ್ಮವಿಷಯವಾಗಿ ಚರ್ಚೆ"[4] ಈ ಶಾಸನವನ್ನು ಗಮನಿಸಿದಾಗ ಅಶೋಕ ಬೌದ್ಧಧರ್ಮ ಪ್ರೇಮಿಯಾಗಿದ್ದರೂ ಬ್ರಾಹ್ಮಣ ಧರ್ಮದವರನ್ನು ಪೂಜಿಸಿ ಅವರಿಗೆ ದಾನ ಮಾಡುತ್ತಿದ್ದುದು ರಾಜಧರ್ಮಕ್ಕೆ ಅನುಗುಣವಾಗಿರುವ ಅಂಶವನ್ನು ಕಸ್ತೂರಿ ಎತ್ತಿ ತೋರಿಸಿ, ಧರ್ಮಸಹಿಷ್ಣುತೆಯನ್ನು ವಿವರಿಸಿದ್ದಾರೆ.

ಅಶೋಕನು ತನ್ನ ಆಳ್ವಿಕೆ ಹದಿನೆಂಟನೆಯ ವರ್ಷದಲ್ಲಿ ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರೆ ಮುಂತಾದವರು ಲಂಕೆಗೆ ಹೋಗಿ ಬೌದ್ಧ ಪ್ರಚಾರ ಮಾಡಿದ ವಿಚಾರ ಹಾಗೂ ಅಶೋಕನು ಬೌದ್ಧ ಭಿಕ್ಷುಗಳಿಗಾಗಿ ಚೈತ್ಯ ವಿಹಾರಗಳನ್ನು ಸವರೋವರ, ಪ್ರಾಸಾದಾಲಯ ಮುಂತಾದವುಗಳನ್ನು ದಾನ ಮಾಡಿದ ಹಲವು ವಿಚಾರಗಳನ್ನು ಈ ಕೃತಿಯಲ್ಲಿ ಕಸ್ತೂರಿ ವಿವರಿಸಿದ್ದಾರೆ. ಮತ್ತು ಅಶೋಕ, ಬೌದ್ಧಧರ್ಮಕ್ಕೆ ಬದಲಾವಣೆಗೊಂಡಿದ್ದ ಎಂಬುದಕ್ಕೆ ಕಸ್ತೂರಿಯವರು ಭಾಬ್ರು ಶಾಸನದ ಪಾಠವನ್ನು ಉದಾಹಣೆಯಾಗಿ ನೀಡಿದ್ದಾರೆ. ಅಹಿಂಸೆಯೇ ಪರಮೋ ಧರ್ಮ ಎಂಬ ಹಿನ್ನಲೆಯಲ್ಲಿ ಬಹ್ಮಗಿರಿ ಶಾಸನದ ಪಾಠದಲ್ಲಿ ಬರುವ 'ಪ್ರಾಣಿಗಳಲ್ಲಿ ದಯೆ ತೋರಿಸತಕ್ಕದ್ದು' ಎಂಬ ಮಾತನ್ನು ಹೇಳಿ 'ಅಹಿಂಸೆ' ಎಂಬ ಮಾತನ್ನು ಮತ್ತಷ್ಟು ಪುಷ್ಟೀಕರಿಸುತ್ತಾನೆ. ಅಶೋಕನ ತನ್ನ ಧರ್ಮದಲ್ಲಿ ಹಿಂಸೆ ಮಾಡಬಾರದು, ಗುರು, ಹಿರಿಯರಿಗೆ ತಂದೆ–ತಾಯಿಯರಿಗೆ, ಬ್ರಾಹ್ಮಣರಿಗೆ ಗೌರವ ಸಲ್ಲಿಸತಕ್ಕದ್ದು ಎಂಬ ವಿಚಾರ ಹಾಗೂ ಅನ್ಯಧರ್ಮ ಸಹಿಷ್ಣುತೆಯನ್ನು ಕಸ್ತೂರಿಯವರು ಅಶೋಕನ ಧರ್ಮದಲ್ಲಿನ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅದೇ ರೀತಿ ಅಶೋಕನು ಶಿಲ್ಪಕಲೆಗೂ ಪ್ರೋತ್ಸಾಹ ನೀಡಿದ ವಿಚಾರವಾಗಿ ಸಾರನಾಥಸ್ತಂಭದ ಶಿರೋವಿಗ್ರವಾದ ನಾಲ್ಕು ಸಿಂಹಗಳು; ಸ್ವತಂತ್ರ ಭಾರತದ ರಾಜ ಚಿಹ್ನೆ, ಅದೇ ರೀತಿ ಅಶೋಕ ಚಕ್ರ, ಬೌದ್ಧ ಭಿಕ್ಷುಗಳಿಗಾಗಿ ಕೆತ್ತಿಸಿದ ಗವಿಗಳ, ಬೌದ್ಧ ವಿಹಾರ ಹೀಗೆ ಅನೇಕ ಶಿಲ್ಪಕಲೆ ವಾಸ್ತುಶಿಲ್ಪದ ಬಗೆಗೆ ಕಸ್ತೂರಿ ವರ್ಣಿಸಿದ್ದಾರೆ. ಜೊತೆಯಲ್ಲಿ ಅಶೋಕನ ಶಾಸನಗಳ ಪಾಠಗಳನ್ನು ನೀಡಿ ಮುಖ್ಯವಾದವುಗಳ ವಿವರಣೆಯನ್ನು ನೀಡಿದ್ದಾರೆ. ಜೊತೆಗೆ ಅಶೋಕನ ಸಾಮ್ರಾಜ್ಯದ ಅಧಃಪತನಕ್ಕೆ ಧರ್ಮದ ಮೇಲಿನ ತೀವ್ರ ಅಭಿಮಾನವೇ ಕಾರಣ ಎಂಬುದನ್ನು ತಿಳಿಸಿದ್ದಾರೆ.

ಅಶೋಕನ ಶಾಸನಗಳು ಭಾರತದ ಚರಿತ್ರೆಯಲ್ಲಿ ಅತ್ಯಂತ ಪ್ರಮುಖವಾದವು. ಕಸ್ತೂರಿಯವರು ಈ ಕೃತಿಯಲ್ಲಿ ಅಶೋಕನ ಬದುಕು–ಸಾಧನೆಗಳ ಜೊತೆಗೆ ಆತನು ತನ್ನ ಆಳ್ವಿಕೆಯಲ್ಲಿ ಹಾಕಿಸಿದ ಶಾಸನಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಒಟ್ಟಾರೆಯಾಗಿ ಅಶೋಕನ ಶಿಲಾಶಾಸನಗಳು 8ನೇ ಅಧ್ಯಾಯದಲ್ಲಿವೆ. ಇಲ್ಲಿ ಮುಖ್ಯವಾಗಿ ಶಾಸನಗಳು ಸಿಕ್ಕಿರುವ ಪ್ರದೇಶದ ವಿವರಣೆಗಳನ್ನು ನೀಡಿದ್ದಾರೆ. ಈ ವಿವರಣೆಗಳಲ್ಲಿ ಜಿಲ್ಲಾ ಕೇಂದ್ರ ಅಥವಾ ಪ್ರಮುಖ ಪಟ್ಟಣಗಳಿಂದ ಎಷ್ಟು ಮೈಲಿಯಿದೆ ಎಂಬುದರ ಜೊತೆಗೆ ಶಿಲ್ಪಗಳ ಬಗ್ಗೆ ತಿಳಿಸಿದ್ದಾರೆ.

ಸ್ತಂಭ ಶಾಸನಗಳ ಪ್ರಾದೇಶಿಕ ವಿವರಣೆಗೆ ಬಂದಾಗ ಯಾವ ರಾಜರು ಎಲ್ಲಿಂದ ಎಲ್ಲಿಗೆ ಸಾಗಿಸಿದರು ಮತ್ತು ಅದನ್ನು ಓದಿ ಪ್ರಕಟಿಸಿದ ಶಾಸನತಜ್ಞರ ಹೆಸರು ಅದರ ಉದ್ದ, ಅಗಲಗಳ ವಿವರಣೆ ನೀಡಿದ್ದಾರೆ. ಉದಾ: "ಡಿಲ್ಲಿ–ಟೋಪ್ರ : ಟೋಪ್ರದಿಂದ ಫಿರೋಸ್‌ಷಾ ಸುಲ್ತಾನ ತಂದು ಡಿಲ್ಲಿಯಲ್ಲಿ ನಿಲ್ಲಿಸಿದ್ದು. ಇದನ್ನೇ ಇತರ ಎಲ್ಲ ಅಶೋಕ ಶಾಸನಗಳಿಗಿಂತ ಮೊದಲು ವಿಮರ್ಶಿಸಿದ್ದು. ಪ್ರಿನ್‌ಸೆಪ್ ಅವರು 1837 ರಲ್ಲಿ ಈ ಸ್ತಂಭಶಾಸನವನ್ನು ಓದಿದರು. 42 ಅಡಿ 7 ಅಂಗುಲ ಎತ್ತರ ಸ್ತಂಭ".[5]

ಅಶೋಕನ ಬಿಡಿ ಶಾಸನಗಳ ವಿಚಾರವಾಗಿ ಬಂದಾಗ ಆ ಶಾಸನಗಳ ಸ್ಥಳ ಮಹತ್ವವನ್ನು ವಿವರಿಸಿದ್ದಾರೆ. ಉದಾ: "ಮಸ್ಕಿ : (ನಿಜಾಂ ಸಂಸ್ಥಾನದ ರಾಯಚೂರು ಜಿಲ್ಲೆ) ಚಿನ್ನದ ಗಣಿಗಳ ಅವಶೇಷಗಳಿವೆ : ಸುವರ್ಣಗಿರಿ ಎಂದು ಶಾಸನದಲ್ಲಿ ಹೇಳಿರುವ ಸ್ಥಳ ಇದಿರಬಹುದು. ಚಾಲುಕ್ಯ ಜಗದೇಕಮಲ್ಲನ ಕಾಲದಲ್ಲಿ ಇದಕ್ಕೆ ರಾಜಧಾನಿಪಿರಿಯಮೊಸಂಗಿ ಎಂಬ ಹೆಸರಿತ್ತು"[6]. ಗುಹಾಶಾಸನ, ಸ್ತಂಭಶಾಸನ, ಬಿಡಿಶಾಸನ ಹೀಗೆ ಅನೇಕ ವಿಭಾಗ ಕ್ರಮಗಳನ್ನು ಅನುಸರಿಸಿದ್ದಾರೆ.

ಇನ್ನು ಶಿಲಾಶಾಸನಗಳ ವಿಷಯದ ವಿವರಣೆಗೆ ಬಂದರೆ ಎರಡು ಕ್ರಮಗಳನ್ನು ಅನುಸರಿಸಿದ್ದಾರೆ. ಪ್ರತ್ಯೇಕವಾಗಿ ಮೂಲ ಭಾಷೆಯಲ್ಲಿ ಶಾಸನಗಳ ಪಾಠ ನೀಡಿದ್ದಾರೆ. ಮತ್ತೊಂದು ಕಡೆ ಪ್ರತ್ಯೇಕ ಅಧ್ಯಾಯದಲ್ಲಿ ಕನ್ನಡದ ಅನುವಾದ ನೀಡಿದ್ದಾರೆ. ಜೊತೆಜೊತೆಗೆ ಅಡಿಟಿಪ್ಪಣಿಗಳಲ್ಲಿ ಕೆಲವು ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳಗಳ ಹಾಗೂ ಪದವಿಶೇಷಗಳನ್ನು ಇತಿಹಾಸದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. 'ದೇವಾನಾಂಪ್ರಿಯ ಪ್ರಿಯದರ್ಶಿರಾಜ' ಎನ್ನುವುದು ಅಶೋಕನ ಎಲ್ಲಾ ಶಾಸನಗಳಲ್ಲಿ ಕಂಡುಬರುವ ಸಾಮಾನ್ಯ ರಾಜನ

ಉಲ್ಲೇಖ ಆದರೆ ಮಸ್ಕಿಯ ಶಾಸನದಿಂದ ಅಶೋಕ ಮತ್ತು ದೇವಾನಾಂಪ್ರಿಯ ಪ್ರಿಯದರ್ಶಿರಾಜ ಒಂದೇ ಎನ್ನುವುದು 1915ರಲ್ಲಿ ತಿಳಿಯುತ್ತದೆ. ಈ ಎಲ್ಲಾ ವಿಚಾರಗಳನ್ನು ಕಸ್ತೂರಿ ಶಾಸನಾಧಾರವಾಗಿ ಮತ್ತು ಇತಿಹಾಸ ಹಿನ್ನೆಲೆಯಲ್ಲಿ ತಿಳಿಸಿದ್ದಾರೆ. ಅಶೋಕನ ಜೀವನ ಚರಿತ್ರೆ, ಧರ್ಮ, ಆಡಳಿತ ಕ್ರಮ ಮುಂತಾದ ವಿಚಾರಗಳನ್ನು ತಿಳಿಸುವಾಗಲೂ, ಶಾಸನಗಳ ಉಲ್ಲೇಖದೊಂದಿಗೆ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಈ ಕೃತಿಯಿಂದ ಕಸ್ತೂರಿಯವರ ಆಶಯ ಮತ್ತು ಧೋರಣೆಯನ್ನು ತಿಳಿಯಬಹುದಾಗಿದೆ. "ಕ್ಷುದ್ರರೂ ತಮ್ಮ ಪರಾಕ್ರಮದಿಂದ ವಿಪುಲವಾದ ಸ್ವರ್ಗವನ್ನು ಪಡೆಯಬಹುದು"[7] ಎಂಬ ದಾರ್ಶನಿಕತೆಯನ್ನು ಮೊದಲಿಗೆ ಜಗತ್ತಿಗೆ ಸಾರಿದವನೂ ಅಶೋಕನೇ. "ಸರ್ವಲೋಕ ಹಿತ ಸಾಧನೆಯೇ ನನ್ನ ಕರ್ತವ್ಯ. ಸರ್ವಲೋಕ ಹಿತ ಸಾಧನೆಗಿಂತ ಮೇಲಾಧ ಕರ್ಮವೇ ಇಲ್ಲ. ನಾನು ಕಿಂಚಿತ್ತದಾದರೂ ಪರಾಕ್ರಮ ಮಾಡುತ್ತಿದ್ದರೆ ಅದು ಇದಕ್ಕಾಗಿ; ಇಲ್ಲಿ ಅವರು ಸುಖವಾಗಿರುವ ಸಲುವಾಗಿ, ಪರದಲ್ಲಿ ಅವರು ಸ್ವರ್ಗವನ್ನು ಪಡೆಯುವ ಸಲುವಾಗಿ"[8] ಹೀಗೆ ಅಶೋಕನ ಶಾಸನಗಳಲ್ಲಿ ಕಳಿಂಗ ಯುದ್ಧಾ ನಂತರದ ಬದುಕು ಮತ್ತು ಅವನ ಆಶಯ ಪ್ರಕಟಗೊಳ್ಳುತ್ತದೆ. ಇಂಥ ಆಶಯಗಳಲ್ಲಿ ಅವನ ತಪ್ಪೊಪ್ಪಿಗೆಯ ಜೀವನ ಕ್ರಮವಿದೆ. ಅಶೋಕನ ಬಗ್ಗೆ ದೊರೆಯುವ ಎಲ್ಲ ಆಕರಗಳನ್ನು ಆಧಾರ ಮಾಡಿಕೊಂಡು ವಿಷಯ ಸಂಗ್ರಹಿಸಿ ರಚಿತವಾಗಿರುವ ಕನ್ನಡದ ಏಕೈಕ ಗ್ರಂಥವಿದು. ಇಲ್ಲಿ ಕಸ್ತೂರಿಯವರು ಅಶೋಕನನ್ನು ಒಬ್ಬ ಯುದ್ಧವೀರನಿಗಿಂತ ಒಬ್ಬ ಶಾಂತಿಧೂತನಂತೆ ಬಿಂಬಿಸಿದ್ದಾರೆ.

**ಕೊನೆಟಿಪ್ಪಣ**


1. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.38.
2. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.38.
3. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.42.
4. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.38.
5. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.122.
6. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.123.
7. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.52.
8. ಅಶೋಕ, ನಾ.ಕಸ್ತೂರಿ, ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 1952, ಪು.28.
9. ನಾ. ಕಸ್ತೂರಿ, ಡಾ ಎ.ಎಸ್ ವೇಣುಗೋಪಾಲರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,1990
10. ಕಸ್ತೂರಿ ಶತಕಂ, ಸಂ: ಎನ್.ಬಿ ಚಂದ್ರಮೋಹನ್, ಕ್ಯಾನ್ವಾಸ್ ಕ್ರಿಯೇಟಿವ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು,1996
11. ಮಿಷನರಿಗಳ ಕನ್ನೆಡ ವೃತ್ತಾಂತವು, ಪ್ರೊ ಎ.ವಿ ನಾವಡ, ಶೋಧನ ಪ್ರಕಾಶನ, ಮಂಗಳೂರು, 2017.